MVC No.85/2023 PW-1

(ಇಂದು ದಿನಾಂಕಃ 02-08-2024 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು ಶ್ರೀ ವಿ.ಎನ್.ಎಮ್ ಎದುರುದಾರ ಪರ ವಕೀಲರಿಂದಃ**

1. ರೋಹಿತ ನನ್ನ ಮಗ ಇರುತ್ತಾನೆ. ಅಪಘಾತದ ಸಮಯದಲ್ಲಿ ಅವನು ಶಾಲೆ ಕಲಿಯುತ್ತಿದ್ದನು ಎಂದರೆ ಸರಿ. ಅಪಘಾತದ ಸಮಯದಲ್ಲಿ ಅವನು 9 ನೇ ತರಗತಿಯಲ್ಲಿ ಇದ್ದ. ಈಗ ಪಿ.ಯು.ಸಿ ಓದುತ್ತಿದ್ದಾನೆ. ಅಪಘಾತ ಆದಾಗಿನಿಂದ ಇಲ್ಲಿಯವರೆಗೆ ನನ್ನ ಮಗ ಶಾಲೆಗೆ ಹೋಗುತ್ತಿದ್ದಾನೆ. ಅಪಘಾತ ಪೆಬ್ರುವರಿ 2 ರಂದು ಆಗಿದೆ. ಅಪಘಾತ ನಾನು ನೋಡಿಲ್ಲ.

ಅಪಘಾತದ ಬಗ್ಗೆ ದೂರನ್ನು ಹಿರಾಸಿಂಗ ಎಂಬುವವರು ಕೊಟ್ಟಿರುತ್ತಾರೆ. ಹಿರಾಸಿಂಗರವರು ಕಂಪ್ಯೂಟರ ಟೈಪ ಮಾಡಿಸಿದ ದೂರನ್ನು ಪೋಲಿಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿ. ನಾನು ಶಾಲೆ ಕಲಿತಿಲ್ಲ. ಹಿರಾಸಿಂಗರವರು ದಿಃ23-01-2022 ರಂದು ಸಂಜೆ 4-00 ಗಂಟೆಗೆ ಕೊಟ್ಟಿರುತ್ತಾರೆ ಎಂದರೆ ಸರಿ. ಎಮ ಎಲ ಸಿ ಪ್ರಕಾರ ದೂರು ದಾಖಲು ಮಾಡಿಕೊಂಡಿರುತ್ತಾರೆ ಎಂದು ಪೋಲಿಸರು ನಿ.ಪಿ-2 ರಲ್ಲಿ ಬರೆದಿಲ್ಲ ಎಂದರೆ ಸರಿ. ಇದೆ ವಾಹನದಿಂದ ಅಪಘಾತ ಆಗಿದೆ ಎಂದು ಹಿರಾಸಿಂಗರವರಿಗೆ ಯಾರು ಹೇಳಿದರು ಎಂದರೆ ಸಾಕ್ಷಿ ಲಕ್ಷ್ಮಣ ಎಂಬುವವರು ಹೇಳಿರುತ್ತಾರೆ ಎಂದು ಹೇಳುತ್ತಾರೆ. ಅಪಘಾತದ ಸಮಯದಲ್ಲಿ ಲಕ್ಷ್ಮಣರವರನ್ನು ಹೊರತುಪಡಿಸಿ ಬೇರೆ ಯಾರು ಅಪಘಾತವನ್ನು ನೋಡಿಲ್ಲ. ಅಪಘಾತದ ಸಮಯದಲ್ಲಿ ಲಕ್ಷ್ಮಣ ತಂದೆ ಚಂದ್ರು, ವಿಠಲ ತಂದೆ ಚಂದ್ರು, ಭೀಮಷಾ ರೇಣು ರಾಥೊಡ, ಶಾಂತಾಬಾಯಿ ರೇಣು ರಾಥೋಡ ಇದ್ದರು ಎಂದರೆ ಸಾಕ್ಷಿ ಇದ್ದಿರ ಬಹುದು ಎಂದು ಹೇಳುತ್ತಾರೆ. ದೂರಿನಲ್ಲಿ ಅಪಘಾತದ ಸ್ಥಳದಲ್ಲಿ ಲಕ್ಷ್ಮಣ ತಂದೆ ಚಂದ್ರು, ವಿಠಲ ತಂದೆ ಚಂದ್ರು, ಭೀಮಷಾ ರೇಣು ರಾಥೋಡ, ಶಾಂತಾಬಾಯಿ ರೇಣು ರಾಥೋಡ ಇದ್ದರು ಎಂದು ಬರೆಸಿಲ್ಲ ಎಂದರೆ ಸರಿ. ಅಪಘಾತ ಆದ ನಂತರ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಪೋಲಿಸರಿಗೆ ನಾನು ಘಟನೆಯ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಹಿರಾಸಿಂಗರವರು ನೀಡಿದ ದೂರಿನಲ್ಲಿ ಘಟನಾಸ್ಥಳದಲ್ಲಿ ಈ ವಾಹನ ಬಿದ್ದಿತ್ತು ಎಂದು ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಸ್ಥಳ ಮಹಜರ ಪ್ರಕಾರ ಪೋಲಿಸರು ಘಟನಾ ಸ್ಥಳದಿಂದ ಯಾವುದೇ ಸಾಮಾನುಗಳನ್ನು ವಶಪಸಿಕೊಂಡಿಲ್ಲ ಎಂದು ಬರೆದಿರುತ್ತಾರೆ ಎಂದರೆ ಸರಿ. ಪೋಲಿಸರು ನನಗೆ ಇದೆ ವಾಹನದಿಂದ ಅಪಘಾತ ಆಗಿದೆ ಎಂದು ನನಗೆ ತೋರಿಸಿಲ್ಲ ಮತ್ತು ನನ್ನ ಯಾವುದೇ ಹೇಳಿಕೆ ಪಡೆದಿಲ್ಲ. ಬಿಕ್ಕುನಾಯಕ ತಾಂಡಾ ಮತ್ತು ರೂಪಲಾ ನಾಯಕ ತಾಂಡಾ ಎರಡು ಆಜುಬಾಜು ಇದೆ ಎಂದರೆ ಸರಿ. ನನ್ನ ಮಗನಿಗೆ ಅಪಘಾತ ಪಡಿಸಿದ್ದ ವ್ಯಕ್ತಿ ಯಾರು ಎಂದು ಲಕ್ಷ್ಮಣರವರು ನನಗೆ ಹೇಳಿದರು, ಸಂಜುಕುಮಾರ ಎಂದು ಹೇಳಿದರು. ವಾಹನ ಸಂಖ್ಯೆ ಕೆ. ಎ 32 ಇಯು 7163 ವಾಹನದಿಂದ ನನ್ನ ಮಗನಿಗೆ ಅಪಘಾತ ಆಗಿಲ್ಲ, ಪರಿಹಾರ ಪಡೆಯುವ ಉದ್ದೇಶದಿಂದ ನನ್ನ ಪಕ್ಕದ ತಾಂಡಾದವರು ವಾಹನವನ್ನು ತೆಗೆದುಕೊಂಡು 2 ದಿನಗಳ ನಂತರ ಸುಳ್ಳು ದೂರು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

2. ಅಪಘಾತ ಆದ ನಂತರ ನೇರವಾಗಿ ಕಾಮರೆಡ್ಡಿ ಆಸ್ಪತ್ರೆಗೆ ಕರೆದುಕೊಂಡು

ಹೋಗಿರುತ್ತೇನೆ. ಆಗ ನಾನು ನನ್ನ ಮಗನ ಜೊತೆ ಇದ್ದೆ. ಆಸ್ಪತ್ರೆಯಲ್ಲಿ ನನ್ನ ಮಗನಿಗೆ ಗಾಯಗಳು ಹೇಗೆ ಆಗಿದೆ ಎಂದು ಕೇಳಿದರು, ಆಗ ನಾನು ಸಂಜುರವರು ಬಂದು ಅಪಘಾತ ಪಡಿಸಿರುತ್ತಾರೆ ಎಂದು ಹೇಳಿದೆ ಅವರು ಅದನ್ನು ಆಸ್ಪತ್ರೆಯ ವರದಿಯಲ್ಲಿ ಬರೆದಿರುತ್ತಾರೆ. ನಾನು ಸಲ್ಲಿಸಿದ ಆಸ್ಪತ್ರೆಯ ಬಿಡುಗಡೆ ಪತ್ರದ ಪ್ರಕಾರ ನನಗೆ ಸಂಜುರವರು ಬಂದು ಅಪಘಾತ ಪಡಿಸಿರುತ್ತಾರೆ ಎಂದು ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ. ಎಮ ಎಲ ಸಿ ವರದಿಯನ್ನು ಪೋಲಿಸ ಠಾಣೆಗೆ ಅಥವಾ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿ ಪೋಲಿಸರು ಆಸ್ಪತ್ರೆಗೆ ಬಂದು ಹೇಳಿಕೆ ಬರೆದುಕೊಂಡು ಹೋಗಿರುತ್ತಾರೆ ಎಂದು ಹೇಳುತ್ತಾರೆ. ಪೋಲಿಸರು ಆಸ್ಪತ್ರೆಗೆ ಬಂದು ಹೇಳಿಕೆ ಬರೆದುಕೊಂಡು ಹೋಗಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ನನ್ನ ಮಗನಿಗೆ ಅಪಘಾತ ಪಡಿಸಿದ ವಾಹನದ ವಿಮೆ ಇರಲಿಲ್ಲ ಆದ್ದರಿಂದ ಅಪಘಾತ ಆದ 2 ದಿನಗಳ ನಂತರ ಹೀರಾಸಿಂಗರವರ ವಿಮೆ ಇರುವ ಗಾಡಿಯನ್ನು ಬಳಸಿಕೊಂಡು ಸುಳ್ಳು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

3. ಕಾಮರೆಡ್ಡಿ ಆಸ್ಪತ್ರೆಯಲ್ಲಿ ನನ್ನ ಮಗ 2 ದಿನ ಇದ್ದನು. ನಾನು ಸಲ್ಲಿಸಿದ ಆಸ್ಪತ್ರೆಯ ಬಿಡುಗಡೆ ಪತ್ರದ ಪ್ರಕಾರ ಕಾಮರೆಡ್ಡಿ ಆಸ್ಪತ್ರೆಯಲ್ಲಿ ನನ್ನ ಮಗ 5 ದಿನ ಇದ್ದನು ಎಂದರೆ ಸಾಕ್ಷಿ 7 ದಿನ ಇದ್ದನು ಎಂದು ಹೇಳುತ್ತಾರೆ. ಸದರಿ ಆಸ್ಪತ್ರೆಯಿಂದ ನನ್ನ ಮಗ ಬಂದ ನಂತರ ಬೇರೆ ಯಾವ ಆಸ್ಪತ್ರೆಗೆ ಅವನಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿಲ್ಲ. ನನ್ನ ಮಗನಿಗೆ ಚಿಕಿತ್ಸೆಗಾಗಿ ರೂ.2,00,000/- ಖರ್ಚು ಮಾಡಿರುತ್ತೇನೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಮಗ ಹಾಲು ಮಾರಾಟ ಮಾಡುವುದು ಮಾಡುತ್ತಾನೆ ಎಂದು ತೋರಿಸಲು ಯಾವುದೇ ದಾಖಲೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ಪತ್ರೆಯಿಂದ ನನ್ನ ಮಗ ಬಂದ ನಂತರ ಅವನಿಗೆ ಯಾವುದೇ ಗಾಯ ಮತ್ತು ತೊಂದರೆ ಇರಲಿಲ್ಲ ಆದ್ದರಿಂದ ಸದರಿ ಆಸ್ಪತ್ರೆಯಿಂದ ನನ್ನ ಮಗ ಬಂದ ನಂತರ ಬೇರೆ ಯಾವ ಆಸ್ಪತ್ರೆಗೆ ಅವನಿಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿಲ್ಲ ಎಂದರೆ ಸಾಕ್ಷಿ ಮತ್ತೆ ಎರಡು ಸಲ ಕರೆದುಕೊಂಡು ಹೋಗಿದ್ದೆ ಎಂದು ಹೇಳುತ್ತಾರೆ. ಈ ಬಗ್ಗೆ ಯಾವುದೇ ದಾಖಲೆ ಸಲ್ಲಿಸಿಲ್ಲ. ನನ್ನ ಮಗನಿಗೆ ಯಾವುದೇ ಅಂಗನ್ಯೂನ್ಯತೆ ಆಗಿರುವುದಿಲ್ಲ ಆದರು ಸಹ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅಂಗನ್ಯೂನ್ಯತೆ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯುವ ಉದ್ದೇಶದಿಂದ ನಾನು ಪೋಲಿಸರು ಹಾಗೂ

ಸಂಜುಕುಮಾರ ಸೇರಿಕೊಂಡು ಸುಳ್ಳು ದೂರು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.